ರೋಣ ತಾಲ್ಲೂಕು ಮತದಾರ ಕ್ಷೇತ್ರದಲ್ಲಿ ಕಟ್ಟಡಗಳಿಲ್ಲದ ಕನ್ನಡ ಹಾಗೂ ಉರ್ದು ಪ್ರಾಥಮಿಕ ಶಾಲೆಗಳ ಸಂಖ್ಯೆ

೩೦೭. ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶಿಕ್ಷಣ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

ಅ) ರೋಣ ತಾಲ್ಲೂಕಿನಲ್ಲಿ ಹಾಗೂ ರೋಣ ಚುನಾವಣಾ ಕ್ಷೇತ್ರ (ಗದಗ ತಾಲ್ಲೂಕಿನಲ್ಲಿಯ ನಾಗಸಮುದ್ರ, ಉಮಚಗಿ, ಕಣಗಿನಹಾಳ, ನೀರಲಗಿ, ಬೆನಕೊಪ್ಪ, ನಾರಾಯಣಪುರ ಗ್ರಾಮಗಳು)ದಲ್ಲಿ ಕಟ್ಟಡಗಳಿಲ್ಲದ ಕನ್ನಡ ಹಾಗೂ ಉರ್ದು ಪ್ರಾಥಮಿಕ ಶಾಲೆಗಳ ಸಂಖ್ಯೆ ಎಷ್ಟು ? ಹಾಗೂ ದುರಸ್ತಿಗಾಗಿ ಕಾದಿರುವ ಕನ್ನಡ ಹಾಗೂ ಉರ್ದು ಪ್ರಾಥಮಿಕ ಶಾಲೆಗಳ ಸಂಖ್ಯೆ ಎಷ್ಟು ?

ಆ) ಯಾವ ಯಾವ ಗ್ರಾಮಗಳಲ್ಲಿ ಮತ್ತು ನಗರಗಳಲ್ಲಿ ಮೇಲೆ ಕಾಣಿಸಿದ ಶಾಲೆಗಳಿರುವುವು ? ಹಾಗೂ ತೀವ್ರತರ ರಿಪೇರಿಗೆ ಬಂದಿರುವ ಶಾಲಾ ಕಟ್ಟಡಗಳ ಸಂಖ್ಯೆ ಎಷ್ಟು (ಊರುಗಳ ಹೆಸರುಗಳನ್ನು ನಮೂದಿಸುವುದು),

ಇ) ನೂತನ ಕಟ್ಟಡಕ್ಕಾಗಿ ಹಾಗೂ ದುರಸ್ತಿಗಾಗಿ ಸರ್ಕಾರವು ಯಾವ ಕ್ರಮ ಕೈಗೊಂಡಿದೆ.

ಶ್ರೀ ಬಿ. ರಾಚಯ್ಯ (ಶಿಕ್ಷಣ ಸಚಿವರು).—

ಅ) ೧. ಕಟ್ಟಡಗಳಿಲ್ಲದ ಶಾಲೆಗಳ ಸಂಖ್ಯೆ ರೋಣ ತಾಲ್ಲೂಕು

ಗ್ರಾಮೀಣ		ನಗರ		
ಕನ್ನಡ	ಉರ್ದು	ಕನ್ನಡ	ಉರ್ದು	ಒಟ್ಟು
೧೦	೧೨	೬	೪	೩೨

ರೋಣ ಚುನಾವಣಾ ಕ್ಷೇತ್ರ

೧೧	೧೪	೬	೪	೩೫

೨. ದುರಸ್ತಿಗಾಗಿ ಕಾದಿರುವ ಕನ್ನಡ ಹಾಗೂ ಉರ್ದು ಪ್ರಾಥಮಿಕ ಶಾಲೆಗಳ ಸಂಖ್ಯೆ ೫೨ —

ಆ) ೧. ಕೆಳಕಂಡ ಗ್ರಾಮಗಳಲ್ಲಿ ಮತ್ತು ನಗರಗಳಲ್ಲಿ ಮೇಲ್ಕಂಡ ಶಾಲೆಗಳಿರುವುವು.

ರೋಣ ತಾಲ್ಲೂಕು (ಗ್ರಾಮೀಣ)

	ಕನ್ನಡ	ಉರ್ದು
೧	ಬಸರ್‌ಕೋಡ್	ಹಿರಿಹಾಳ್
೨	ಕಳ್ಳಿಹಾಳ	ಕೀರುಡಗಿ
೩	ಗೂಲ್‌ಗುಲಿ	ಅತ್ತಿಗೇರಿ
೪	ಚಿಕ್ಕಲಗುಂದಿ	ಜಿಕ್ಕಿ
೫	ಸೂಡಿ	ಗೋಗೇರಿ
೬	ಹಲಕೇರಿ	ಇಟಗಿ
೯	ಹೊಳೆ ಆಲೂರು	ಹೊಳೆ ಆಲೂರ್
೧೦	ಬ್ಯಾಟಿ	ವೀರನ ಬಸವಿ
೧೧	ರುದ್ರಾಪುರ	ಅಸೂಟಿ
೧೨	ಎರ್‌ಪರಬಿನಹಾಳ	ಬೆಳವಣಗಿ
೧೩	...	ಯುವನಾಳ್
೧೪	...	ಸೂಡಿ

೧	ರೋಣ	೧	ಗಜೇಂದ್ರಗಡ
೨	ಪ್ರಾ. ಶಾ. ಗಜೇಂದ್ರಗಡ-೨	೨	ರೋಣ
೩	,, ಗಜೇಂದ್ರಗಡ-೩	೩	ನಿರೇಗಲ್
೪	,, ... -೪	೪	ರೋಣ (ಹೆ.ವಂ ಶಾಲೆ)
೫	,, ... -೫		
೬	,, ... -೬		

ರೋಣ ಚುನಾವಣಾ ಕ್ಷೇತ್ರ
(ಗ್ರಾಮೀಣ)

ಕನ್ನಡ	ಉರ್ದು
೧ ಬೆನಕೊಪ್ಪ	೧ ಕನಗಿನಹಾಳ
	೨ ಉಮಚಗಿ

ನಗರ ಪ್ರದೇಶದಲ್ಲಿ ಇಲ್ಲ

೨ ತೀವ್ರತರ ರಿಪೇರಿ ಆಗಬೇಕಾದ ಶಾಲೆ ಕಟ್ಟಡಗಳ ಸಂಖ್ಯೆ–೨೫

ಗ್ರಾಮಗಳ ಹೆಸರು ಕೆಳಗಿನಂತಿದೆ.—

೧. ಪ್ಯಾಟಿ ೨. ಬೊಮ್ಮಸಾಗರ ೩. ಮಂಲೇಒರಂಬಿನಹಾಳ ೪. ಗಾಜಗೋಳಿ ೫. ಸರ್ಜಾಪುರ ೬. ಜಗಳೂರು ೭. ಕರೆಹಟ್ಟಿ ೮. ಹಡಗಲಿ ೯. ರುದ್ರಾಪುರ ೧೦. ಗುದಮಾಗಡಿ ೧೧. ಚಿಕ್ಕಣಿಳಗುಂಡಿ ೧೨. ಗುಳಗಾಳಿ ೧೩. ಗುಳಗುಂದಿ ೧೪. ನೆಲ್ಲೂರು ೧೫. ನಿದಗುಂದಿ ೧೬. ಹೊಳಿಆಲೂರು ೧೭. ಮ್ಯಾಲೆ ಜರಿ.

ರೋಣ ತಾಲ್ಲೂಕಂ (ನಗರ ವಿಭಾಗ)
೧. ಗಜೇಂದ್ರಗಡ ೨. ಉಂಚಗೇರಿ ೩. ತೋಟಗೇರಿ ೪. ಕೃಷ್ಣಪುರ

ರೋಣ ಚುನಾವಣಾ ಕ್ಷೇತ್ರ

೧. ಕೋಟಮುಚಗಿ ೨. ಕೋಟಮಚಗಿ (ಕ.ಹೆ. ಶಾಲೆ) ೩. ನಾರಾಯಣಪುರ ೪. ನೀರಲಡಿ

೫) ಪ್ರತಿ ವರ್ಷ ಶಾಲಾ ಕೋಣೆಗಳ ನಿರ್ಮಾಣಕ್ಕಾಗಿ ಹಾಗೂ ದುರಸ್ತಿಗಾಗಿ ಸರ್ಕಾರದ ಅನುದಾನವನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡುತ್ತಾರೆ. ಸದರಿ ಅನುದಾನವನ್ನು ಜಿಲ್ಲಾಧಿಕಾರಿಗಳು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಗೆ ಶಾಲಾ ಕೋಣೆಗಳ ನಿರ್ಮಾಣಕ್ಕಾಗಿ ಹಾಗೂ ದುರಸ್ತಿಗಾಗಿ ಬಿಡುಗಡೆ ಮಾಡುತ್ತಾರೆ. ಅದರಂತೆ ಸರ್ಕಾರವು ರಾಷ್ಟ್ರೀಯ ಗ್ರಾಮಾಂತರ ಯೋಜನೆಯ ಅನ್ವಯ ಹಾಗೂ ವಿಶೇಷ ಯೋಜನೆಯನ್ವಯವು ಶಾಲಾ ಕೋಣೆಗಳನ್ನು ಕಟ್ಟಲು ಹಣ ಮಂಜೂರಿ ಮಾಡಿದ್ದು ಸಹ ಇರುತ್ತದೆ. ನಗರ ಪ್ರದೇಶಗಳಲ್ಲಿ ಶಾಲೆಗಳ ನಿರ್ಮಾಣ ಮತ್ತು ದುರಸ್ತಿ ಕಾರ್ಯವನ್ನು ಲೋಕೋಪಯೋಗಿ ಇಲಾಖೆಗೆ ವಹಿಸಿದೆ.

ರಾಜ್ಯದಲ್ಲಿ ತೋಟಗಾರಿಕೆಯ ಪ್ರಗತಿ ಕುರಿತು

೨೭೧. ಶ್ರೀ ಹೆಚ್. ಗಂಗಾಧರಸ್ವಾಮಿ (ಕೃಷ್ಣರಾಜ).— ಪಶುಸಂಗೋಪನೆ, ಪಶುವೈದ್ಯ ಸೇವೆಗಳು ಹಾಗೂ ತೋಟಗಾರಿಕಾ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.—

ಅ) ರಾಜ್ಯದಲ್ಲಿ ಜಿಲ್ಲಾವಾರು ಎಷ್ಟು ಎಕರೆ ತೋಟಗಾರಿಕೆ ಇಲಾಖೆಯ ಆಡಳಿತಕ್ಕೆ ಸೇರಿದೆ ;

ಆ) ತೋಟದ ಪ್ರಮುಖ ಬೆಳೆಗಳೇನು ;

ಇ) ಕಳೆದ ೫ ವರ್ಷಗಳಿಂದ ವರ್ಷಾವಧಿ ಬಂದ ಆದಾಯ ಎಷ್ಟು ;

ಈ) ವರ್ಷಕ್ಕೆ ಇಲಾಖೆಗಾಗಿ ಸಂಬಳ ಸಾರಿಗೆ ಇತ್ಯಾದಿ ಆಗುವ ಖರ್ಚು ಎಷ್ಟು ?